# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 18048/2013

| | |
|---|---|
| ಸಾಕ್ಷಿದಾರರ ಹೆಸರು : | ರವಿಕುಮಾರ ಹೆಚ್. ಎ. |
| ತಂದೆಯ ಹೆಸರು : | ಲೇಟ್. ಆಂಜನಪ್ಪ |
| ವಯಸ್ಸು : | 66 ವರ್ಷ |
| ಉದ್ಯೋಗ : | ನಿವೃತ್ತ ಪಿ.ಎಸ್.ಐ |
| ವಾಸ : | ಪರಪ್ಪನ ಅಗ್ರಹಾರ, ಬೆಂಗಳೂರು. |

**ದಿನಾಂಕ 15/03/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**
**ದಂ.ಪ್ರ.ಸಂ.ಕಲಂ. 299 ರ ಅಡಿಯಲ್ಲಿ ಸಾಕ್ಷಿಯ ಹೇಳಿಕೆಃ**

1. ನಾನು 2012 ರಿಂದ 2018 ರವರೆಗೆ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 10/09/2013 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-10 ರವರಿಂದ ಪಡೆದುಕೊಂಡಿರುತ್ತೇನೆ. ದಿನಾಂಕ 15/09/2013 ರಂದು ಚಾಸಾ-8 ಮತ್ತು 9 ರವರಿಗೆ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ಕರೆದುಕೊಂಡು ಬರುವಂತೆ ನೇಮಿಸಿರುತ್ತೇನೆ. ಅದೇ ದಿನ ಚಾಸಾ-8 ಮತ್ತು 9 ರವರು 1ನೇ ಆರೋಪಿಯನ್ನು ಕರೆದುಕೊಂಡು ಬಂದು ನನ್ನ ಮುಂದೆ ಹಾಜರು ಪಡಿಸಿರುತ್ತಾರೆ. ಚಾಸಾ-9 ರವರು ವರದಿ ನೀಡಿರುತ್ತಾರೆ. ಅದೇ 1ನೇ ಆರೋಪಿಯನ್ನು ವಿಚಾರಣೆ ಮಾಡಿ ಆತನ ಸ್ವಇಚ್ಚಾ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. 1ನೇ ಆರೋಪಿಯು ತನ್ನ ಸ್ವಇಚ್ಚಾ ಹೇಳಿಕೆಯಲ್ಲಿ, ಕಳುವು ಮಾಡಿದ್ದ ಚಿನ್ನದ ಒಡವೆಗಳನ್ನು ಶಾಂತಿನಿಕೇತನ್ ಲೇಔಟ್ ನ ಶಿವಾ ಎಂಬುವವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿದ್ದನು. ನನ್ನನ್ನು ಕರೆದುಕೊಂಡು ಹೋದರೆ ಒಡವೆಗಳನ್ನು ಮಾರಾಟ ಮಾಡಿದ್ದ ಶಿವನನ್ನು ತೋರಿಸುತ್ತೇನೆ ಎಂದು ಹೇಳಿಕೆ

ನೀಡಿದ್ದನು. ಪಂಚರಾದ ಚಾಸಾ-6 ಮತ್ತು 7 ರವರನ್ನು ಠಾಣೆಗೆ ಕರೆಯಿಸಿ ಅವರಿಗೆ ವಿಷಯ ತಿಳಿಸಿ, 1ನೇ ಆರೋಪಿಯು ಕರೆದುಕೊಂಡು ಹೋದಂತೆ ಶಾಂತಿನಕೇತನ ಲೇಔಟ್ ನಲ್ಲಿರುವ ಶಿವ ಎಂಬುವವರ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಶಿವ ಬಿನ್ ಮುರುಗನ್ ಈತನಿಗೆ ವಿಷಯ ತಿಳಿಸಿದಾಗ ಅವರು ತಮ್ಮ ಅಂಗಡಿಯ ಒಳಗೆ ಹೋಗಿ ಕೆಲವು ಚಿನ್ನದ ಒಡವೆಗಳನ್ನು ಹಾಜರು ಪಡಿಸಿರುತ್ತಾರೆ. ಸದರಿ ಚಿನ್ನದ ಆಭರಣಗಳನ್ನು ಪಂಚನಾಮೆಯ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಮದ್ಯಾಹ್ನ 03.15 ರಿಂದ 04.00 ಗಂಟೆಯವರೆಗೆ ಸ್ಥಳದಲ್ಲಿ ತಯಾರಿಸಿರುತ್ತೇನೆ. ಠಾಣೆಗೆ ಹಿಂತಿರುಗಿ ಅಮಾನತ್ತು ಪಡಿಸಿಕೊಂಡ ಚಿನ್ನದ ಒಡವೆಗಳನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಪಂಚರಾದ ಚಾಸಾ-6 ಮತ್ತು 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

3. ನ್ಯಾಯಾಲಯದ ಅನುಮತಿ ಪಡೆದು ಚಿನ್ನದ ಆಭರಣಗಳನ್ನು ಚಾಸಾ-1 ರವರಿಗೆ ಮದ್ಯಂತರ ಸ್ವಾಧೀನಕ್ಕೆ ಕೊಟ್ಟಿರುತ್ತೇನೆ. 1ನೇ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ 1 ಮತ್ತು 2 ನೇ ಆರೋಪಿತರ ವಿರುದ್ದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯ ನಿಪಿ-3 ರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು**. ಸಾಕ್ಷಿಯು ನಿಪಿ-4 ಫೋಟೋ ನೋಡಿ ಅದರಲ್ಲಿರುವ ಒಡವೆಗಳನ್ನು ನೋಡಿ ಗುರುತಿಸಿದ್ದಾರೆ. 1ನೇ ಆರೋಪಿಯ ಸ್ವಇಚ್ಚಾ ಹೇಳಿಕೆಯಲ್ಲಿ "ಒಡವೆಗಳನ್ನು ಮಾರಾಟ ಮಾಡಿದ ಶಿವನನ್ನು ತೋರಿಸಿಕೊಡಿಸಿ ಕೊಡುತ್ತೇವೆ" **ಎಂಬ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು**. ಸಾಕ್ಷಿಯು ಅಮಾನತ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ.

**ಆದ್ದರಿಂದ ಅಮಾನತ್ತು ಪಂಚನಾಮೆಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು**. 1ನೇ ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.